ದಿಃ 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಸಿ.ಎ.ಎಸ್. ಪ್ರತಿವಾದಿ ಪರ ವಕೀಲರಿಂದಃ

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನಗೆ ಓದಲು ಬರುವುದಿಲ್ಲ. ನಾನು ಗಂಗಸಂದ್ರದಲ್ಲಿ 30 ವರ್ಷಗಳ ಕಾಲ ವಾಸವಾಗಿದ್ದೇನೆ. ಗೋಟಕಾನನಾಪುರಗೂ ಗಂಗಸಂದ್ರಕ್ಕೂ 5 ಕಿ.ಮಿ ದೂರವಿರುತ್ತದೆ. ನನ್ನ ಅಕ್ಕನ ಹೆಸರು ಗಂಗಮ್ಮ ಅವರು ತಿಮ್ಮಗಾನಹಳ್ಳಿಯಲ್ಲಿ ವಾಸವಾಗಿರುತ್ತಾರೆ. ನನಗೆ ತಾಯಿ ಇಲ್ಲ ಅವರು ತೀರಿಕೊಂಡು 20 ವರ್ಷ ಆಯಿತು. ನನಗೆ ತಂದೆ ಇಲ್ಲ ಅವರು ತೀರಿಕೊಂಡು 35 ವರ್ಷ ಆಯಿತು. ನನ್ನ ತಾಯಿ ಜೀವಂತವಾಗಿದ್ದಾಗ ನನ್ನ ಜೊತೆ ವಾಸವಾಗಿದ್ದರು. ದಾವಾ ಸ್ವತ್ತಿನ ಆಸ್ತಿಯು ಮೂಲತಃ ನಮ್ಮದಾಗಿರುತ್ತದೆ. ಮೂಲತಃ ಅಂದರೆ ತಾತನಿಂದ ನನ್ನ ಅಪ್ಪನಿಗೆ, ಅಪ್ಪನಿಂದ ನನಗೆ ಬಂದಿರುತ್ತದೆ. ನನ್ನ ತಾತನ ಹೆಸರು ನಾರಾಯಣಪ್ಪ. ನನ್ನ ತಂದೆಯ ಹೆಸರು ವೆಂಕಟಪ್ಪ. ಮೂಲತಃ ನನ್ನ ತಾತನ ಆಸ್ತಿಯೆಂದು ತೋರಿಸಲು ದಾಖಲಾತಿಯನ್ನು ನೀಡಿದ್ದೀರಾ ಎಂದರೆ ಸರಿ. ನನ್ನ ತಾತನ ಆಸ್ತಿಯೆಂದು ತೋರಿಸಲು ಯಾವ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಯಾವ ದಾಖಲಾತಿಯಿಂದ ನನ್ನ ತಾತನ ಹೆಸರಿಗೆ ಆಸ್ತಿ ಬಂತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಹೇಳಿಕೆಯ ಪ್ರಕಾರ ದಾವಾ ಸ್ವತ್ತು ನನ್ನ ತಾತನಿಂದ ತಂದೆಗೆ ಬಂದಿರುತ್ತದೆ, ತಂದೆಯಿಂದ ನನ್ನ ತಾಯಿಗೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಆಸ್ತಿ ಬಂದಿರುವ ದಾಖಲಾತಿಯನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ನನ್ನ ತಂದೆಗೆ ಆಸ್ತಿ ಬಂದಿರುವ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ನಾನು ಹಾಗೂ ನನ್ನ ಅಕ್ಕ ಜಂಟಿ ಖಾತೆ ಮಾಡಿಸುವಾಗ ನನ್ನ ತಾಯಿ ಜೀವಂತವಾಗಿ ಇರಲಿಲ್ಲ.

ತಿಮ್ಮಯ್ಯ ಯಾರು ಎಂದರೆ ನನ್ನ ದೊಡ್ಡಪ್ಪ ಇರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ತಿಮ್ಮಯ್ಯ ರವರಿಗೂ ಹಕ್ಕು ಇತ್ತಾ ಎಂದರೆ ಇಲ್ಲ. ತಿಮ್ಮಯ್ಯ ರವರಿಗೆ 3 ಜನ

ಮಕ್ಕಳಿರುತ್ತಾರೆ. ನಾರಾಯಣಪ್ಪ, ನಾಗರಾಜು ಮತ್ತೊಬರ ಹೆಸರು ನನಗೆ ನೆನಪಿಲ್ಲ. ದಾವಾಸ್ತಿಯಲ್ಲಿ ತಿಮ್ಮಯ್ಯ ರವರ 3 ಜನ ಮಕ್ಕಳಿಗೆ ಹಕ್ಕು ಇತ್ತಾ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ದಿಃ 23.02.2019 ರ ವಿಭಾಗದಂತೆ 2 ಐಟಂ ಸ್ವತ್ತುಗಳು ಖಾತೆ ಹಾಗೂ ಸ್ವಾಧೀನಕ್ಕೆ ಬಂದಿರುತ್ತದೆ ಎಂದು ಬರೆಯಿಸಿದ್ದೀರಾ ಎಂದರೆ ಗೊತ್ತಿಲ್ಲ. ಪ್ರತಿವಾದಿ ನನಗೆ ಹುಟ್ಟಿದಾಗಿನಿಂದಲೂ ಪರಿಚಯವಿದೆ. ಪ್ರತಿವಾದಿಯ ಊರು ಗೋಟಕನಾಪುರದಲ್ಲಿ ಇರುತ್ತದೆ. ದಾವಾಸ್ತಿಯು ಗೋಟಕನಾಪುರದಲ್ಲಿ ಇದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು